ಅಧ್ಯಾಯ ಎರಡು: ಖಗೋಳ ಶಾಸ್ತ್ರ: ವೃತ್ತಾಕಾರದ ಚಿತ್ರಗಳು ಸೂರ್ಯ, ಚಂದ್ರ, ನಕ್ಷತ್ರಗಳನ್ನು ಒಳಗೊಂಡಿದೆ. 12 ಚಿತ್ರಗಳ ಒಂದು ಮಾಲಿಕೆಯಲ್ಲಿ ರಾಶಿ ಚಕ್ರದ ಸಂಪ್ರದಾಯಿಕ ಚಿಹ್ನೆಗಳೂ ಇವೆ (ಎರಡು ಮೀನು, ಒಂದು ಎತ್ತು, ಬಿಲ್ಲು ಹಿಡಿದ ಬೇಟೆಗಾರ ಇತ್ಯಾದಿ.) ಇದರ ಸುತ್ತಲೂ ವೃತ್ತಾಕಾರ ದಲ್ಲಿ ಮೂವತ್ತು ಹೆಂಗಸರ ಚಿತ್ರಗಳಿದ್ದು ಬಹುತೇಕ ಎಲ್ಲ ಹೆಂಗಸರೂ ಭಾಗಶಃ ನಗ್ನವಾಗಿದ್ದಾರೆ. ಪ್ರತಿಯೊಬ್ಬರ ಕೈಲೂ ಏನೋ ಬರೆದಿರುವ ನಕ್ಷತ್ರವೊಂದಿದೆ. ಈ ಅಧ್ಯಾಯದ ಕೊನೆಯ ಎರಡು ಪುಟಗಳು ನಾಪತ್ತೆಯಾಗಿವೆ. ಏರಿಸ್ ಮತ್ತು ಟಾರಸ್ ರಾಶಿ ಚಕ್ರಗಳಲ್ಲಿ ನಾಲ್ಕು ಜೋಡಿ ಚಿತ್ರಗಳಲ್ಲಿ 15 ಹೆಂಗಸರು ಕೈಲಿ ಒಂದೊಂದು ನಕ್ಷತ್ರ ಇಟ್ಟುಕೊಂಡಿರುವ ಚಿತ್ರವಿದೆ. ಕೆಲವು ಪುಟಗಳು ಇತರ ಪುಟಗಳಿಗಿಂತ ದೊಡ್ಡದಾಗಿದ್ದು ಅವುಗಳನ್ನು ಮಡಚಲಾಗಿದೆ.

ಅಧ್ಯಾಯ ಮೂರು: ಜೀವಶಾಸ್ತ್ರ ಒತ್ತೊತ್ತು ಅಕ್ಷರಗಳಿರುವ ಅಲ್ಲಲ್ಲಿ ಚಿತ್ರಗಳಿರುವ ಈ ಅಧ್ಯಾಯದಲ್ಲಿ ಸ್ನಾನಗೃಹಗಳಲ್ಲಿರುವ ನಗ್ನ ಸ್ತ್ರೀ ಚಿತ್ರಗಳು ಇವೆ. ಬಾತ್ ಟಬ್‌ಗಳಿಗೆ ಅನೇಕ ಪೈಪುಗಳ ಸಂಪರ್ಕಗಳಿದ್ದು ಅವುಗಳಲ್ಲಿ ಕೆಲವು ಮನುಷ್ಯನ ದೇಹಾಂಗಗಳ ಆಕಾರವನ್ನು ಹೊಂದಿವೆ. ಕೆಲವು ಹೆಂಗಸರು ಕಿರೀಟ ಧರಿಸಿದ್ದಾರೆ.

ನಾಲ್ಕನೆಯ ಅಧ್ಯಾಯ: ಭೂಗೋಳ: ಇದರಲ್ಲಿ ಮಡಚಿರುವ ಹಾಳೆಗಳು ಅನೇಕವಿವೆ. ಇವು ಇತರ ಪುಟಗಳಿಗಿಂತ ಆರು ಪಟ್ಟು ದೊಡ್ಡದಾಗಿವೆ. ವೃತ್ತಾಕಾರದ ಚಿತ್ರಗಳು ಭೂ ನಕ್ಷೆ, ಹಾಗೂ ಒಂಭತ್ತು ದ್ವೀಪಗಳು ಇದ್ದು ಅವುಗಳ ನಡುವೆ ಸೇತುವೆಗಳನ್ನು ಚಿತ್ರಿಸಲಾಗಿದೆ. ಅರಮನೆಗಳು ಜ್ವಾಲಾಮುಖಿಗಳು ಚಿತ್ರದಲ್ಲಿವೆ.

ಐದನೆಯ ಅಧ್ಯಾಯ: ಔಷಧೀಯ: ಈ ಅಧ್ಯಾಯದಲ್ಲಿ ಗಿಡಗಳ ಭಾಗಗಳಿದ್ದು ಅವುಗಳ ಭಾಗಗಳನ್ನು ವಿವಿಧ ಹೆಸರುಗಳಿಂದ ಪಟ್ಟಿ ಮಾಡಿದ್ದಾರೆ ಪುಟದ ಅಂಚಿನಲ್ಲಿ, ಔಷಧಗಳನ್ನಿಡುತ್ತಿದ್ದ ಜಾಡಿಗಳ ಚಿತ್ರಗಳಿವೆ.

ಆರನೆಯ ಅಧ್ಯಾಯ: ಮಾಡುವ ವಿಧಾನಗಳು: ಸಣ್ಣ ಸಣ್ಣ ಪ್ಯಾರಾಗಳು ಅದಕ್ಕೆ ನಕ್ಷತ್ರ ಅಥವಾ ಹೂಗಳ ಬುಲೆಟ್‌ಗಳ ಚಿತ್ರ.

ಚಿತ್ರಗಳು:

ಈ ಪುಸ್ತಕದಲ್ಲಿ ವಿಶೇಷವಾಗಿ, ಗುರುತಿಸಲಾಗದ ಗಿಡಗಳು ಇವೆ. ಸಸ್ಯ ಜನ್ಯ ರೆಸಿಪಿಗಳು ಇದ್ದಂತಿದೆ. ಸಣ್ಣ ಗಾತ್ರದ ಬೆತ್ತಲೆ ಹೆಂಗಸರು ಬಾತ್ ಟಬ್‌ಗಳಲ್ಲಿ ಮೋಜು ಮಾಡುತ್ತಿರುವ ಚಿತ್ರಗಳು ಇವೆ. ಈ ಬಾತ್ ಟಬ್‌ಗಳಿಗೆ ಜೋಡಿಸಿರುವ ನೀರಿನ ಕೊಳವೆಗಳು ಅಂಗರಚನೆಯ ಭಾಗಗಳಂತೆ ಕಾಣುತ್ತವೆಯೇ ವಿನಹ ಪ್ಲಂಬಿಂಗ್ ಭಾಗಗಳಾಗಿ ಕಾಣುವುದಿಲ್ಲ. ಟೆಲಿಸ್ಕೋಪಿನಲ್ಲಿ ನೋಡಿದರೆ ಮಾತ್ರ ಕಾಣಬಹುದಾದಂತಹ ಖಗೋಲ ವಸ್ತುಗಳೂ, ಮೈಕ್ರೋಸ್ಕೋಪಿನಲ್ಲಿ ನೋಡಿದರೆ ಮಾತ್ರ ಕಾಣಬಹುದಾದಂತಹ ಜೀವಕೋಶ ಚಿತ್ರಗಳು ಅದರಲ್ಲಿದೆ. ರಾಶಿಚಕ್ರಗಳಂತೆ ಕಾಣುವ ಚಿತ್ರಗಳಲ್ಲಿ ಕಸದ ತೊಟ್ಟಿಗಳಲ್ಲಿ ಕುಳಿತಿರುವ ಸಣ್ಣ ಗಾತ್ರದ ಬೆತ್ತಲೆ ಸ್ತ್ರೀಯರ ಚಿತ್ರಗಳಿವೆ.

ಉದ್ದೇಶ:

ಭಾಷೆ ಅರಿಯದಿದ್ದರೂ ಸಹ ಈ ಪುಸ್ತಕದ ಉಳಿದಿರುವ ಪುಟಗಳನ್ನು ನೋಡಿದವನಿಗೆ ಇದು ಔಷಧೀಯ ಕೈಪಿಡಿ ಎಂದು ತಿಳಿಯುತ್ತದೆ. ಆದರೆ ವಿಚಿತ್ರವಾದ ಚಿತ್ರಗಳು ಅನೇಕ ಊಹಾ ಪೋಹಗಳಿಗೆ ಎಡೆಕೊಡುತ್ತಿದೆ. ಈ ಪುಸ್ತಕ ಎಲ್ಲಿಂದ ಬಂತು, ಏಕೆ ರಚಿಸಿದರು ಮತ್ತು ಯಾರು ಎಂಬುದರ ಬಗ್ಗೆ ಕೇವಲ ಊಹೆಗಳು ನಡೆಯುತ್ತಿವೆ. ಚಿತ್ರ ನೋಡಿ ಗಿಡವನ್ನು ಗುರುತಿಸಲು ಸಾಧ್ಯವಿಲ್ಲದಷ್ಟು ಸಂಪೂರ್ಣವಾಗಿ ಚಿತ್ರಗಳು ಸೋತಿವೆ. ಇವುಗಳಲ್ಲಿ ಎರಡೇ ಎರಡು ಮೂಲಿಕೆಗಳನ್ನು ಗುರುತಿಸಲು ಸಾಧ್ಯವಾಗಿದೆ. ಕೆಲವು ಗಿಡಗಳಿಗೆ ಬೇರುಗಳೇ ಒಂದು ಜಾತಿಯ ಗಿಡದ್ದು, ಅದರ ಎಲೆಗಳ ವಿನ್ಯಾಸವು ಬೇರೆಯೇ ಗಿಡದ್ದು ಹಾಗೂ ಹೂವುಗಳು ಮತ್ತೊಂದು ಗಿಡದ್ದಾಗಿದೆ.

ಜೀವಶಾಸ್ತ್ರದ ಅಧ್ಯಾಯದಲ್ಲಿ ಬೇಸಿನ್, ಟ್ಯೂಬುಗಳ ಚಿತ್ರಗಳಿರುವುದನ್ನು ನೋಡಿದರೆ ಇದು ರಸವಿದ್ಯೆಯ ಬಗ್ಗೆ ಹೇಳುತ್ತದೆ ಎನಿಸುತ್ತದೆ. ಆದರೆ ಆ ಶತಮಾನದ ರಸವಿದ್ಯೆಯ ಎಲ್ಲ ಗ್ರಂಥಗಳಲ್ಲಿ ಕಂಡುಬರುವ ಕೆಲವು ಸಾಧಾರಣ ಚಿತ್ರಗಳಾದ ಹದ್ದು, ಕಪ್ಪೆ, ಗೋರಿಯಲ್ಲಿ ಮಾನವ, ಹಾಸಿಗೆಯಲಿ ಗಂಡು ಹೆಣ್ಣು ಇಂತಹ ಚಿತ್ರಗಳು ಇಲ್ಲಿ ಇಲ್ಲದಿರುವುದರಿಂದ ವಾಯ್ನಿಚ್ ಹಸ್ತಪ್ರತಿ



## ಅಪೂರ್ವ ಭಾಷೆ

ಭಾಷಾ ಶಾಸ್ತ್ರಜ್ಞ ಜ್ಯಾಕ್ವೆಸ್ ಗೈ ಅಭಿಪ್ರಾಯದ ಪ್ರಕಾರ ಇದೊಂದು ಅಸಮಾನ್ಯ ಅಪರೂಪದ ಭಾಷೆ. ಪೂರ್ವ ಹಾಗೂ ಮಧ್ಯ ಏಷ್ಯಾದ ಭಾಷೆಗಳನ್ನು ಹೋಲುವ ಪದಗಳ ಆಂತರಿಕ ರಚನೆ ಇದ್ದಂತಿದೆ. ಕನ್ನಡದ ವರ್ಣಮಾಲೆಯ ವ್ಯಂಜನಕ್ಕೆ ಕಾಗುಣಿತದ ಎಲ್ಲ ಕೊಂಬು ಕೋಡುಗಳನ್ನೂ ಸೇರಿಸಿದರೆ ಹೇಗೆ ಹದಿನಾರು ವಿವಿಧ ಆಕಾರಗಳ ಅಕ್ಷರಗಳು ಕಾಣುತ್ತವೋ ಹಾಗೆಯೇ ಇಲ್ಲೂ ಇದ್ದು ಪಾಶ್ಚಿಮಾತ್ಯರಿಗೆ ಇದು ತಿಳಿಯದೆ ಹೋಗಿರಬಹುದು. ಚಿತ್ರಗಳಲ್ಲಿ ವರ್ಷವನ್ನು 365 ದಿನಗಳ ಬದಲಿಗೆ 360 ಡಿಗ್ರಿಗಳಾಗಿ ವಿಭಾಗ ಮಾಡಿರುವುದು, ಮೀನಾ ರಾಶಿಯಿಂದ ಪ್ರಾರಂಭಿಸಿ 15 ದಿನಗಳ ಗುಂಪುಗಳನ್ನು ಮಾಡಿರುವುದು, ನೋಡಿದರೆ ಚೈನೀಸ್ ವ್ಯವಸಾಯ ಪಂಚಾಂಗದಂತೆಯೇ ಇದೆ. ಆದರೆ ಈ ಹಸ್ತಪ್ರತಿಯ ಬಗ್ಗೆ ಇಷ್ಟು ಸಹ ನಿಖರವಾಗಿ ಹೇಳಲು ಸಾಧ್ಯವಿಲ್ಲ ಏಕೆಂದರೆ ಚೈನೀ ವಿದ್ವಾಂಸರೇ ಏಷ್ಯಾದ ಯಾವ ಸಂಸ್ಕೃತಿಯ ಹೋಲಿಕೆಗಳೂ ಇದರಲ್ಲಿ ಇಲ್ಲವೆಂದು ಹೇಳಿದ್ದಾರೆ.

ಗ್ಲಾಸೋಲೇಲಿಯ

ಕೆಲವೊಮ್ಮೆ ಕೆಲವರಿಗೆ ವಿಶಿಷ್ಟ ಸಂದರ್ಭಗಳಲ್ಲಿ ಅಪರಿಚಿತ ಭಾಷಾ ಜ್ಞಾನ ಬಂದು ಬಿಡುತ್ತದೆ ಅಥವಾ ಅವರಿಗೆ ಯಾರೋ ಮಾತನಾಡುತ್ತಿರುವಂತೆ ಭಾಸವಾಗುತ್ತದೆ. ಜೆರಿ ಕೆನಡಿ ಮತ್ತು ರಬ್ ಚರ್ಚ್ ಹಿಲ್ ಎಂಬ ವಿದ್ವಾಂಸರು ಹಿಲ್ಡೆಗಾರ್ಡ್ ವಾನ್ ಬಿನ್ಜೆನ್ ತೀವ್ರ ಮೈಗ್ರೇನ್ ನೋವಿಗೆ ಸಿಕ್ಕಾಗ ಮಂತ್ರಸ್ಥಿತಿಗೆ ಹೋಗಿ ತನಗೇ ಅರಿವಿಲ್ಲದ ಬರಹವನ್ನು ಬರೆದ ಉದಾಹರಣೆಯನ್ನು ಕೊಟ್ಟು ವಾಯ್ನಿಚ್ ಹಸ್ತ ಪ್ರತಿ ಅಂತಹ ಗ್ಲಾಸೋಲೇಲಿಯ ಸ್ಥಿತಿಯಲ್ಲಿ ಬರೆದಿರಬಹುದು ಎಂದು ಹೇಳುತ್ತಾರೆ. ಇದನ್ನು ಒಪ್ಪಲು ಹೇಗೆ ಅಸಾಧ್ಯವೋ ನಿರಾಕರಿಸಲೂ ಅಷ್ಟೇ ಅಸಾಧ್ಯ.

ವಿದ್ವಾಂಸರ ಅಭಿಪ್ರಾಯಗಳು ಏನೇ ಇರಲಿ ಯಾರೂ ಇನ್ನೂ ಯಾವ ನಿರ್ದಿಷ್ಟ ನಿರ್ಧಾರಕ್ಕೂ ಬಂದಿಲ್ಲ. ಅದರ ಅರ್ಥ ಏನೆಂದು ಸ್ಪಷ್ಟವಾಗಿ ಹೇಳಲು ಸಾಧ್ಯವಾಗಿಲ್ಲ. ವಾಯ್ನಿಚ್ ಹಸ್ತ ಪ್ರತಿ ಜನರಿಗೆ ಇನ್ನೂ ಕುತೂಹಲದ ಮೂಲವಾಗಿ ಉಳಿದಿರುವುದೇ ಸತ್ಯ.